# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
## ಕೇಂದ್ರ ಕಚೇರಿ : ಸಿಬ್ಬಂದಿ ಶಾಖೆ

ಸಂ.ಕರಾಸಾ/ಕೇಕ/ಸಿಬ್ಬಂದಿ/ಸಿ-3/198/ 638/2018-19 ದಿನಾಂಕ:21-08-2018

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು,
ಬೆಂಮನಸಾ/ಈಕರಸಾ/ವಾಕರಸಾ ಸಂಸ್ಥೆ.
ಮುಖ್ಯ ಲೆಕ್ಕಾಧಿಕಾರಿ ಹಾಗೂ ಅರ್ಥಿಕ ಸಲಹೆಗಾರರು,
ಮುಖ್ಯ ಸಂಚಾರ ವ್ಯವಸ್ಥಾಪಕರು (ಕಾ/ವಾ),
ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು,
ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು,
ಕರಾರಸಾ ನಿಗಮ.

ವಿಷಯ: ಅನುಚ್ಛೇಧ 371 (ಜೆ) ರ ಅನ್ವಯ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ನೇಮಕಾತಿ/ ಬಡ್ತಿ ಮೀಸಲಾತಿಯ ಕುರಿತು ಕ್ರಮ ಕೈಗೊಳ್ಳಲು ಮಾಹಿತಿಯನ್ನು ಕಳುಹಿಸುವ ಬಗ್ಗೆ.

ಉಲ್ಲೇಖ: 1) ಕರಾರಸಾ/ಕೇಕ/ಸಿಬ್ಬಂದಿ/ಹೈ-ಕ/198/138-18-19 ದಿನಾಂಕ: 15-05-2018.
2) ಸಂ.ಈಕರಸಾ/ಕೇಕ/ಸಿಬ್ಬಂದಿ/1790/2015 ದಿನಾಂಕ: 29-08-2015.
3) ಸಂ.ಬೆಮಸಾಸಂ/ಕೇಕ/ನೇಮಕ/ಆರ್1/364/16-17 ದಿನಾಂಕ: 10-05-2016.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅನುಚ್ಛೇಧ 371 (ಜೆ) ಅನ್ವಯ ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿ/ಬಡ್ತಿಯಲ್ಲಿ ಅಧಿಕಾರಿ/ಮೇಲ್ವಿಚಾರಕ ವೃಂದಗಳಲ್ಲಿ ಗುರುತಿಸಿದ ಹುದ್ದೆಗಳ ಹಂಚಿಕೆ ಮಾಡಲು ಉಲ್ಲೇಖ-1 ರನ್ವಯ ಅಧಿಸೂಚನೆ ಹೊರಡಿಸಿದ್ದು, ಅದರಂತೆ ಈಗಾಗಲೇ ಇಚ್ಛಾಪತ್ರ/ಘೋಷಣಾ ಪತ್ರ ಸಲ್ಲಿಸಿರುವ ಅಧಿಕಾರಿ/ಮೇಲ್ವಿಚಾರಕ ಸಿಬ್ಬಂದಿಗಳ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ಅದರಂತೆ, 371 (ಜೆ) ಮೀಸಲಾತಿ ಅನ್ವಯಿಸುವ ಅಧಿಕಾರಿ/ಮೇಲ್ವಿಚಾರಕ ಸಿಬ್ಬಂದಿಗಳು ಬೆಂಮನಸಾ ಸಂಸ್ಥೆ ಹಾಗೂ ಈಕರಸಾ ಸಂಸ್ಥೆಗಳ ಪೈಕಿ ಯಾವ ಸಂಸ್ಥೆಗೆ ಸೇರ್ಪಡೆಗೊಳ್ಳಲು ಇಚ್ಛಿಸುತ್ತಾರೆ ಎಂಬ ಬಗ್ಗೆ ಈ ಪತ್ರದೊಂದಿಗೆ ಲಗತ್ತಿಸಿರುವ ಸ್ವಯಂ ಘೋಷಣಾ ಪತ್ರದ ನಮೂನೆಯಲ್ಲಿ ಈ ಕೂಡಲೇ ಸದರಿಯವರುಗಳಿಂದ ಮಾಹಿತಿ ಪಡೆದು ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ವಾಕರಸಾ ಸಂಸ್ಥೆ ಈಕರಸಾ ಸಂಸ್ಥೆ ಹಾಗೂ ಬೆಮನಸಾ ಸಂಸ್ಥೆಯ ರವರು ತಮ್ಮ ಸಂಸ್ಥೆಯ ವಿಭಾಗವಾರು ಕ್ರೊಢೀಕೃತ ಮಾಹಿತಿ ಹಾಗೂ ಮೂಲ ದಾಖಲಾತಿಗಳೊಂದಿಗೆ ದಿನಾಂಕ:27-08-2018 ರಂದು ಈ ಕಚೇರಿಗೆ ಖುದ್ದಾಗಿ ಹಾಜರಾಗಿ ನೀಡುವುದು.

ಕರಾರಸಾ ನಿಗಮದ ಸಂಬಂಧಪಟ್ಟ ಆಡಳಿತಾಧಿಕಾರಿ/ಸಹಾಯಕ ಅಡಳಿತಾದಿಕಾರಿಯವರು ತಮ್ಮ ವಿಭಾಗದ ಕ್ರೋಢೀಕೃತ ಮಾಹಿತಿ ಹಾಗೂ ಮೂಲ ದಾಖಲಾತಿಯೊಂದಿಗೆ ದಿನಾಂಕ:27-08-2018 ರಂದು ಈ ಕಚೇರಿಗೆ ಖುದ್ದಾಗಿ ಹಾಜರಾಗಿ ನೀಡುವುದು.

371 (ಜೆ) ಮೀಸಲಾತಿ ಸಂಬಂಧ ಹಲವಾರು ಅಧಿಕಾರಿ/ಮೇಲ್ವಿಚಾರಕ ಸಿಬ್ಬಂದಿಗಳು ಇಚ್ಛಾಪತ್ರ/ಘೋಷಣಾ ಪತ್ರಗಳ ಝರಾಕ್ಸ್ ಪ್ರತಿಗಳನ್ನು ಸಲ್ಲಿಸಿದ್ದು (ಈ ಸಂಬಂಧ ಪ್ರತ್ಯೇಕ ಪತ್ರ ಬರೆಯಲಾಗಿದೆ) ಅವರುಗಳ ಮೂಲ ದಾಖಲಾತಿಗಳನ್ನು ಸಹ ಪಡೆದು ಹಾಜರುಪಡಿಸುವುದು.

ಇಚ್ಛಿತ ಸಂಸ್ಥೆಗಳಿಗೆ ಮೀಸಲಾತಿ ಕೋರಿ ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವ ಅಧಿಕಾರಿ/ಮೇಲ್ವಿಚಾರಕ ಸಿಬ್ಬಂದಿಗಳನ್ನು ಅವರುಗಳು ಇಚ್ಛಿಸಿದಂತೆ ಉಲ್ಲೇಖ-2 ಮತ್ತು 3 ರಲ್ಲಿ ಸೂಚಿಸಿರುವಂತೆ ಈಕರಸಾ ಸಂಸ್ಥೆ ಹಾಗೂ ಬೆಮನಸಾ ಸಂಸ್ಥೆಗಳಿಗೆ ಅಯಾ ಸಂಸ್ಥೆಗಳ 371 (ಜೆ) ಮೀಸಲಾತಿ ಹುದ್ದೆಗಳ ಲಭ್ಯತೆಯನುಸಾರ ಅವರುಗಳ ವರಿಷ್ಟತೆಯಾಧಾರದಲ್ಲಿ ಹಂಚಿಕೆ ಮಾಡಲಾಗುವುದು. ಈ ಎರಡು ಸಂಸ್ಥೆಗಳ ಪೈಕಿ ಒಂದು ವೇಳೆ ಅಭ್ಯರ್ಥಿಗಳು ಮೀಸಲಾತಿ ಕೋರಿದ ಸಂಸ್ಥೆಯಲ್ಲಿ ಮೀಸಲಾತಿ ಹುದ್ದೆ ಲಭ್ಯವಾಗದಿದ್ದಲ್ಲಿ ಮತ್ತೊಂದು ಸಂಸ್ಥೆಯಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗುವುದು. ಈಗಾಗಲೇ 371 (ಜೆ) ಅನ್ವಯ ಮೀಸಲಾತಿ ಇಚ್ಛಾಪತ್ರ/ಘೋಷಣಾ ಪತ್ರ ಸಲ್ಲಿಸಿರುವ ಅಧಿಕಾರಿ/ಮೇಲ್ವಿಚಾರಕ ಸಿಬ್ಬಂದಿಗಳು ಇಚ್ಛಿತ ಸಂಸ್ಥೆಗಳಿಗೆ ಮೀಸಲಾತಿ ಕೋರಿ ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸದಿದ್ದಲ್ಲಿ ಅವರುಗಳಿಗೆ ನಿಗಮದ ವತಿಯಿಂದಲೆ ಈಕರಸಾ ಸಂಸ್ಥೆ ಅಥವಾ ಬೆಮನಸಾ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗುವುದು. ಈ ವಿಷಯದಲ್ಲಿ ನಿಗಮದ ತೀರ್ಮಾನೇ ಅಂತಿಮವಾಗಿರುತ್ತದೆ.

ಮುಂದುವರೆದು, ಅಭ್ಯರ್ಥಿಯು 371(ಜೆ) ಮೀಸಲಾತಿ ಇಚ್ಛಿಸಿದ ಎರಡೂ ಸಂಸ್ಥೆಗಳಲ್ಲಿ ಮೀಸಲಾತಿ ಹುದ್ದೆಗಳು ಲಭ್ಯವಾಗದಿದ್ದಲ್ಲಿ ಅವರುಗಳ 371 (ಜೆ) ಮೀಸಲಾತಿ ಕೋರಿಕೆಯನ್ನು ತಿರಸ್ಕರಿಸಲು ಹಾಗೆಯೇ, ಈಗಾಗಲೇ ಅನುಚ್ಛೇಧ 371 (ಜೆ) ಅನ್ವಯ ಮೀಸಲಾತಿ ಕೋರಿ ಇಚ್ಛಾಪತ್ರ/ಘೋಷಣಾ ಪತ್ರ ಸಲ್ಲಿಸಿರುವುದನ್ನು ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂ.ಡಿಪಿಎಆರ್/ 33/ ಹೆಚ್‌ಕೆಪಿ/2014 ದಿನಾಂಕ: 10-04-2014 ರನ್ವಯ ಹಿಂಪಡೆಯಲು ಅವಕಾಶವಿರುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಅಡಕ:ಸ್ವಯಂ ಘೋಷಣಾ ಪತ್ರದ ನಮೂನೆ,

ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ)

ಪ್ರತಿಯನ್ನು: ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಸಿ:ಪ)ರವರ ಹಿರಿಯ/ಆಪ್ತ ಕಾರ್ಯದರ್ಶಿಗಳು, ಕರಾರಸಾ ನಿಗಮ ಕೇಂದ್ರ ಕಛೇರಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ: ಬೆಂಗಳೂರು

ಹೈದರಾಬಾದ್ –ಕರ್ನಾಟಕ ಮೀಸಲಾತಿ ಬಯಸುವ ಅಧಿಕಾರಿ / ನೌಕರರು ಸಲ್ಲಿಸುವ

### ಸ್ವಯಂ ಘೋಷಣಾ ಪತ್ರ

| | | |
|---|---|---|
| 1. | ಹೆಸರು | |
| 2. | ತಂದೆಯ ಹೆಸರು | |
| 3. | ಹುಟ್ಟಿದ ದಿನಾಂಕ | |
| 4. | ಜಾತಿ ಹಾಗೂ ಪ್ರವರ್ಗ<br>(ಪ್ರವರ್ಗ–GM/SC/ST/C-1/2A/2B/3A/3B) | ಜಾತಿ:................................................<br>ಪ್ರವರ್ಗ:................................................ |
| 5. | ಪ್ರಸುತ ಹುದ್ದೆ | |
| 6. | ಪ್ರಸ್ತುತ ಕಾರ್ಯಸ್ಥಳ | |
| 7. | (ಅ) ಸಂಸ್ಥೆಯಲ್ಲಿ ಪ್ರಥಮವಾಗಿ ನೇರ ನೇಮಕಾತಿಯಡಿಯಲ್ಲಿ ನೇಮಕಗೊಂಡಿರುವ ಹುದ್ದೆ ಹೆಸರು.<br>(ಆ)ನೇರ ನೇಮಕಾತಿ ದಿನಾಂಕ.<br>(ಇ) ನೇರ ನೇಮಕಾತಿಯಲ್ಲಿ ಆಯ್ಕೆಯಾಗಿರುವ ಪ್ರವರ್ಗ (ಪ್ರವರ್ಗ–GM/SC/ST/C-1/2A/2B/3A/3B) | (ಅ)................................................<br>(ಆ)................................................<br>(ಇ)................................................ |
| 8. | (ಅ) ದಿನಾಂಕ:01.01.2013 ರಂದು ಹೊಂದಿದ್ದ ಹುದ್ದೆ ಹೆಸರು.<br>(ಆ) ನೇಮಕಗೊಂಡಿರುವ ವಿಧ (ನೇರ ನೇಮಕಾತಿ/ಮುಂಬಡ್ತಿ)<br>(ಇ) ನೇರ ನೇಮಕ/ ಮುಂಬಡ್ತಿ ಹೊಂದಿದ ದಿನಾಂಕ.<br>(ಈ) ನೇರ ನೇಮಕಾತಿಯಡಿಯಲ್ಲಿ ಆಯ್ಕೆಯಾಗಿರುವ /ಮುಂಬಡ್ತಿ ಹೊಂದಿರುವ ಪ್ರವರ್ಗ.(GM/SC/ST/C-1/2A/2B/3A/3B) | (ಅ)................................................<br>(ಆ)................................................<br>(ಇ)................................................<br>(ಈ)................................................ |
| 9. | (ಅ)ದಿನಾಂಕ:01.1.2013 ರ ನಂತರದಲ್ಲಿ ನೇರ ನೇಮಕಾತಿ/ ಮುಂಬಡ್ತಿ ಹೊಂದಿದ್ದಲ್ಲಿ ನೇರ ನೇಮಕಾತಿ/ ಮುಂಬಡ್ತಿ ಹೊಂದಿರುವ ಹುದ್ದೆ ಹೆಸರು.<br>(ಆ) ನೇಮಕಗೊಂಡಿರುವ ವಿಧ (ನೇರ ನೇಮಕಾತಿ / ಮುಂಬಡ್ತಿ)<br>(ಇ)ನೇರ ನೇಮಕಾತಿ/ ಮುಂಬಡ್ತಿ ದಿನಾಂಕ.<br>(ಈ) ನೇರ ನೇಮಕಾತಿಯಡಿಯಲ್ಲಿ ಆಯ್ಕೆಯಾಗಿರುವ /ಮುಂಬಡ್ತಿ ಹೊಂದಿರುವ ಪ್ರವರ್ಗ.(GM/SC/ST/C-1/2A/2B/3A/3B) | (ಅ)................................................<br>(ಆ)................................................<br>(ಇ)................................................<br>(ಈ)................................................ |
| 10. | ಹೈದರಾಬಾದ್–ಕರ್ನಾಟಕ ಮೀಸಲಾತಿಯನ್ನು ಶಾಶ್ವತವಾಗಿ ಬಯಸುವ ಸಂಸ್ಥೆ ಹೆಸರು(ಈಕರಸಾ ಸಂಸ್ಥೆ / ಬೆಂಮನಸಾಸಂ)<br>(ಪುನಃ ಬದಲಾಯಿಸಲು ಅವಕಾಶವಿರುವುದಿಲ್ಲ.) | |

ದಿನಾಂಕ:__________

ಸಹಿ:____________________

ಹುದ್ದೆ:____________________

ಕಾರ್ಯಸ್ಥಳ:____________________

ಸಂಸ್ಥೆ:____________________

ಸೇವಾ ದಾಖಲಾತಿಗಳನ್ನು ಪರಿಶೀಲಿಸಿ ಧೃಡೀಕರಿಸಲಾಗಿದೆ.

ಸಹಾಯಕ ಆಡಳಿತಾಧಿಕಾರಿ/ಆಡಳಿತಾಧಿಕಾರಿ/
ವಿಭಾಗೀಯ ನಿಯಂತ್ರಣಾಧಿಕಾರಿ/ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು
(ಮೊಹರಿನೊಂದಿಗೆ)

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
## ಕೇಂದ್ರ ಕಛೇರಿ, ಸಿಬ್ಬಂದಿ ಶಾಖೆ

**ಸಂ.ಕರಾಸಾ/ಕೇಕ/ಸಿಬ್ಬಂದಿ/ಸಿ-3/198/640 /2018-19** **ದಿನಾಂಕ:01-09-2018**

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು,
ಬೆಂಮನಸಾ ಸಂಸ್ಥೆ/ಈಕರಸಾ ಸಂಸ್ಥೆ/ವಾಕರಸಾ ಸಂಸ್ಥೆ.
ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು/ಪ್ರಾಂಶುಪಾಲರು
ಕಾರ್ಯ ವ್ಯವಸ್ಥಾಪಕರು/ಕಾರ್ಯ ನಿರ್ವಾಹಕ ಅಭಿಯಂತರರು/
ಮುದ್ರಣ ಮತ್ತು ಸಾಮಗ್ರಿ ನಿಯಂತ್ರಣಾಧಿಕಾರಿ,
ಕರಾರಸಾ ನಿಗಮ.

ಮಾನ್ಯರೆ,

ವಿಷಯ:- ಅನುಚ್ಛೇದ 371 (ಜೆ) ರನ್ವಯ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ನೇಮಕಾತಿ/ಬಡ್ತಿ ಮೀಸಲಾತಿಯ ಕುರಿತು ಕ್ರಮ ಕೈಗೊಳ್ಳಲು ಮಾಹಿತಿಯ ಸ್ವಯಂ ಘೋಷಣಾ ಪತ್ರದನ್ನು ಕರಾರಸಾ ನಿಗಮದ ವೆಬ್‌ಸೈಟ್ ನಲ್ಲಿ ಪ್ರಕಟಿಸಿದ್ದು, ಸ್ವಯಂ ಘೋಷಣಾ ಪತ್ರವನ್ನು ಜಾರಿಗೊಳಿಸುವ ಬಗ್ಗೆ.

ಉಲ್ಲೇಖ:- ಸಂ:ಕರಾರಸಾ/ಕೇಕ/ಸಿಬ್ಬಂದಿ/198/638/ 18-19 ದಿ:21-08-2018.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅನುಚ್ಛೇಧ 371 (ಜೆ) ಅನ್ವಯ ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿ/ಬಡ್ತಿಯಲ್ಲಿ ಅಧಿಕಾರಿ/ಮೇಲ್ವಿಚಾರಕ ವೃಂದಗಳಲ್ಲಿ ಗುರುತಿಸಿದ ಹುದ್ದೆಗಳ ಹಂಚಿಕೆ ಮಾಡಲು ಅಧಿಸೂಚನೆ ಹೊರಡಿಸಿದ್ದು, ಅದರಂತೆ ಈಗಾಗಲೇ ಇಚ್ಛಾಪತ್ರ/ಘೋಷಣಾ ಪತ್ರ ಸಲ್ಲಿಸಿರುವ ಅಧಿಕಾರಿ/ಮೇಲ್ವಿಚಾರಕ ಸಿಬ್ಬಂದಿಗಳ ಪಟ್ಟಿಯನ್ನು ಕಳುಹಿಸಲಾಗಿದೆ.

ಅದರಂತೆ, 371 (ಜೆ) ಮೀಸಲಾತಿ ಅನ್ವಯಿಸುವ ಅಧಿಕಾರಿ/ಮೇಲ್ವಿಚಾರಕ ಸಿಬ್ಬಂದಿಗಳು ಬೆಂಮನಸಾ ಸಂಸ್ಥೆ ಹಾಗೂ ಈಕರಸಾ ಸಂಸ್ಥೆಗಳ ಪೈಕಿ ಯಾವ ಸಂಸ್ಥೆಗೆ ಸೇರ್ಪಡೆಗೊಳ್ಳಲು ಇಚ್ಛಿಸುತ್ತಾರೆ ಎಂಬ ಬಗ್ಗೆ ಈ ಪತ್ರದೊಂದಿಗೆ ಲಗತ್ತಿಸಿರುವ ಸ್ವಯಂ ಘೋಷಣಾ ಪತ್ರದ ನಮೂನೆಯನ್ನು ಕರಾರಸಾ ನಿಗಮದ ವೆಬ್ ಸೈಟ್‌ನಲ್ಲಿ ಪ್ರಕಟಿಸಿದ್ದು, (www.ksrtc.in) ಸದರಿ ಘೋಷಣಾ ಪತ್ರವನ್ನು ಡೌನ್ ಲೋಡ್ ಮಾಡಿಕೊಂಡು ಕಡ್ಡಾಯವಾಗಿ ಜಾರಿಗೊಳಿಸುವುದು.

ತಮ್ಮ ವಿಶ್ವಾಸಿ,

ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ)